**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ನೇ ಪ್ರತಿವಾದಿ ಪರ : ಶ್ರೀ ಡಿ.ಎಸ್.ಎಸ್., ವಕೀಲರಿಂದಃ**

ನಾನು ಪಿ ಯು ಸಿ ವರೆಗೆ ಓದಿರುತ್ತೇನೆ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಈ ಕೇಸಿನ ಪ್ರತಿವಾದಿಯವರು ಯಾರು ಯಾರು ಅಂತ ಗೊತ್ತಿಲ್ಲ. ಅದೇ ರೀತಿ ಈ ಕೇಸಿನ 1 ರಿಂದ 3 ನೇ ಪ್ರತಿವಾದಿಯವರ ತಂದೆ ಯಾರು ಅಂತ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರ ತಂದೆಗೆ 4 ಜನ ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನ 3 ನೇ ಪ್ರತಿವಾದಿ ಗಂಗಮ್ಮ ಯಾರ ಮಗಳು ಇರುತ್ತಾಳೆ ಅಂತ ಗೊತ್ತಿಲ್ಲ.

ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸಹಜವಾಗಿ ತಂದೆ ತಾಯಿಗೆ ಮಕ್ಕಳು ಎಷ್ಟು ಜನ ಇರುತ್ತಾರೋ ಅವರಿಗೆ ಸಮನಾದ ಪಾಲು ಕೊಡುವುದು ಪ್ರತೀತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಅವಳ ಸಹೋದರಿಯರ ವಿರುದ್ಧ ಪಿತ್ರಾರ್ಜಿತ ಆಸ್ತಿಗಳಲ್ಲಿ ತನಗೆ 1/4 ನೇ ಭಾಗ ಪಾಲು ಬೇಕು ಅಂತ ಚಳ್ಳಕೆರೆ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 88/2006 ರಂತೆ ದಾವೆ ಸಲ್ಲಿಸಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಂತರ 1 ನೇ ಪ್ರತಿವಾದಿ ಚಿತ್ರದುರ್ಗ ಹೆಚ್ಚುವರಿ ನ್ಯಾಯಾಲಯದಲ್ಲಿ ಆರ್.ಎ. ನಂ. 102/2010 ರಂತೆ ಅಪೀಲು ಸಲ್ಲಿಸಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲು ಪುರಸ್ಕೃತವಾಗಿ 1 ನೇ ಪ್ರತಿವಾದಿಗೆ ಆಸ್ತಿಯಲ್ಲಿ ಹಕ್ಕು ಇದೆ ಅಂತ ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಂತರ 1 ನೇ ಪ್ರತಿವಾದಿ ಎಫ್.ಡಿ.ಪಿ. ಅರ್ಜಿ ಸಲ್ಲಿಸಿ ಆ ಪ್ರಕಾರ ಆಸ್ತಿಗಳನ್ನು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ವಿಚಾರ 5 ನೇ ಪ್ರತಿವಾದಿಜಿ.ಪಿ. ತಿಪೆಪೇಸ್ವಾಮಿ ರವರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಅದೇರೀತಿ ಎಲ್ಲಾ ಪ್ರತಿವಾದಿಗಳಿಗೆ ನ್ಯಾಯಾಲಯದಿಂದ ನೋಟೀಸ್? ಜಾರಿ ಮಾಡಿ ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರೆವಿನ್ಯೂ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಅದೇರೀತಿ 1 ನೇ ಪ್ರತಿವಾದಿಯು ಕಾಲಕಾಲಕ್ಕೆ ಕಂದಾಯ ಕಟ್ಟುತ್ತಾ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಎಂದಿಗೂ ಸಹ ದಾವಾ ಷೆಡ್ಯೂಲ್?ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದಾಗ ಮೋಸದಿಂದ ದಿಃ 07.12.2013 ರಂದು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಹಾಗಾಗಿ ನಾನು 5 ನೇ ಪ್ರತಿವಾದಿಯಿಂದ ಕೊಂಡುಕೊಂಡ ಆಸ್ತಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ದಾವೆ ನ್ಯಾಯಾಲಯದಲ್ಲಿ ಪೆಂಡಿಂಗ್?ಇದ್ದಾಗ ವಿಲ್?ಕ್ರಯ, ವೆಗೈರೆ ಮಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು 2 ರಿಂದ 5 ನೇ ಪ್ರತಿವಾದಿಯವರೊಂದಿಗೆ ಶರೀಕಾಗಿ ಮೋಸದಿಂದ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಮಾಡಿಕೊಂಡ ಕ್ರಯಪತ್ರ ಪ್ರತಿವಾದಿಯವರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಷೆಡ್ಯೂಲ್? ಸ್ವತ್ತುಗಳಲ್ಲಿ ಯಾವತ್ತೂ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಮತ್ತು ನೋಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಚಾಲ್ತಿ ಪಹಣಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್? ಸ್ವತ್ತಿನಲ್ಲಿ ನಾನೇ ಹಣ ಹಾಕಿ ಅಭಿವೃದ್ದಿಪಡಿಸಿರುತ್ತೇನೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ 4 ನ್ಯಾಯಾಲಯಗಳಲ್ಲಿ ದಾವಾ ಆಸ್ತಿ ಕುರಿತು ಪ್ರಕರಣ ಪೆಂಡಿಂಗ್? ಇದ್ದಾಗ ನಾನು ದಾವಾ ಸ್ವತ್ತನ್ನು ನಾನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್? ಸ್ವತ್ತು ಚೌಳಕೆರೆ ಗ್ರಾಮದ ರಿ.ಸರ್ವೆ ನಂ. 51 ಆಗಿರುತ್ತದೆ ಎಂದರೆ ಸರಿ. ನಾನು ವಿನಾಕಾರಣ ಪ್ರತಿವಾದಿಗಳನ್ನು ದಾವೆಗೆ ಸೇರಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(1 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.